# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
## ಅಫಜಲಪೂರ

ಸಿಸಿ ನಂ.07/2015

ಚಾಸಾ-6 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 28.01.2019

| | | |
|---|---|---|
| ಹೆಸರು | ಃ | ಧರೆಪ್ಪ ಬಿರಾದಾರ |
| ತಂದೆ ಹೆಸರು | ಃ | ಶಂಕ್ರಗೌಡ |
| ವಯಸ್ಸು | ಃ | 30-ವರ್ಷ |
| ಉದ್ಯೋಗ | ಃ | ಹೆಚ್‌ಸಿ-532 |
| ವಾಸಸ್ಥಳ | ಃ | ರೇವೂರ ಬಿ. |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

2008 ರಿಂದ ಅಗಷ್ಟ-2014 ರವರೆಗೆ ದೇವಲಗಾಣಗಾಪೂರ ಠಾಣೆಯಲ್ಲಿ ಪಿಸಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ ದಿನಾಂಕ 17.05.2010 ರಂದು ಅಫಜಲುಪೂರ ತಾಲೂಕಿನ ಗ್ರಾ.ಪಂ. ಗಳ ಮತ ಎಣಿಕೆ ಬಂದೋಬಸ್ತ ಸಲುವಾಗಿ ಅಫಜಲಪೂರ ಪಟ್ಟಣದಲ್ಲಿರುವ ಮಹಾಂತೇಶ್ವರ ವಿದ್ಯಾವರ್ಧಕ ಕಾಲೇಜಿನಲ್ಲಿ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಸದರಿ ಕಾಲೇಜಿನ ಮುಖ್ಯ ದ್ವಾರದ ಗೇಟನ ಹತ್ತಿರ ಚಾಸಾ-1 ರವರ ಜೊತೆಗೆ ನನಗೆ ಮತ್ತು ರೇವೂರ ಠಾಣೆಯ ಹೆಚ್‌ಸಿ-222, ಅಫಜಲಪೂರ ಠಾಣೆಯ ಹಾಗೂ ರೇವೂರ ಠಾಣೆಯ ಸಿಬ್ಬಂದಿ ಅಂದಾಜು 10-ಜನ ಬಂದೋಬಸ್ತ ಕರ್ತವ್ಯಕ್ಕೆ ಹಾಜರಾಗಿರುತ್ತೇವೆ.

ಮುಂಜಾನೆ 8.30 ಗಂಟೆಗೆ ಮತ ಎಣಿಕೆ ಮಾಹಿತಿ ಧ್ವನಿವರ್ಧಕದ ಮೂಲಕ ಸರಿಯಾಗಿ ಕೇಳುತ್ತಿಲ್ಲ ಎಂದು ಸಾಕಷ್ಟು ಜನ ಮತ ಎಣಿಕೆ ಕೇಂದ್ರಕ್ಕೆ ನುಗ್ಗಲು ಪ್ರಯತ್ನಿಸಿದಾಗ ಹೊರಗಿನಿಂದ ಬೀಸಿ ಹೊಡೆದ ಕಲ್ಲು ಚಾಸಾ-1 ರವರ ತಲೆಯ ಹಿಂಭಾಗದಲ್ಲಿ, ಚಾಸಾ-5 ರವರ ಬೆನ್ನಿಗೆ, ಚಾಸಾ-4 ರವರ ಗಲ್ಲಕ್ಕೆ ಬಡೆದಿದ್ದು, ಏ ಬೋಸಡಿ ಮಕ್ಕಳೆ ಗೇಟ್ ತೆಗಿರಿ ನಾವು ಒಳಗಡೆ ಹೋಗಬೇಕು ಎಂದು ಅವಾಚ್ಯ ಶಬ್ದಗಳಿಂದ ಕೂಡ ಬೈದಾಡುತ್ತಿದ್ದರು. ಘಟನೆ ಸಮಯದಲ್ಲಿ ಸಾಕಷ್ಟು ಜನರು

ಸೇರಿದ್ದರಿಂದ ಯಾರು ಕಲ್ಲು ಒಗೆದಿರುತ್ತಾರೆಂದು ಗುರುತಿಸಲು ಆಗಿಲ್ಲ. ಸಾಕ್ಷಿ ಮೂಲ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಓ-1 ರಿಂದ 4 ಎಂದು ಗುರುತಿಸಲಾಗಿದೆ. ಆದರೆ ಘಟನೆ ಸಮಯದಲ್ಲಿ ಆರೋಪಿತರು ಕೂಡ ಇರಬಹುದು ಆದರೆ ಖಚಿತವಾಗಿ ಹೇಳಲು ಬರುವುದಿಲ್ಲ. ಘಟನೆಯಾದ ನಂತರ ಚಾಸಾ-1, 4 ಮತ್ತು 5 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಈ ಕುರಿತು ಚಾಸಾ-1 ಪ್ರಕರಣ ದಾಖಲಿಸಿದ್ದು, ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆ. ಘಟನೆ ಕುರಿತು ಪುರವಣಿ ಹೇಳಿಕೆ ನೀಡಿಲ್ಲ.

(ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ಪ್ರಕರಣದಲ್ಲಿಯ ದಾಖಲೆಗಳನ್ನು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿಸಲಾಯಿತು)

ಪಾಟಿ ಸವಾಲುಃ ಎಪಿಪಿ ಯವರಿಂದ

ಘಟನೆ ಸಮಯದಲ್ಲಿ ಅಪರಾದದಲ್ಲಿ ಭಾಗಿಯಾದ ವ್ಯಕ್ತಿಗಳನ್ನು ನೋಡಿ ಗುರುತಿಸಿದ ಕುರಿತು ದಿನಾಂಕ 27.01.2011 ರಂದು ಈಗ ಓದಿ ಹೇಳಲಾದ ನಿಪಿ-1 ರಂತೆ ಪುರವಣಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ

ಘಟನೆ ದಿವಸ ಅಂದಾಜು 100 ಹಳ್ಳಿ ಜನರು ಮತ ಎಣಿಕೆ ಕೇಂದ್ರದ ಹತ್ತಿರ ಜಮಾಯಿಸಿದ್ದರು. ನಮ್ಮ ಸಿಬ್ಬಂದಿಯವರನ್ನು ಹೊರತುಪಡಿಸಿ ಮತ ಎಣಿಕೆ ಸಮಯದಲ್ಲಿ ಸಹಾಯಕರೆಂದು ಸಿಪಾಯಿ ಹಾಗೂ ಇತರ ಸಿಬ್ಬಂದಿ ಕೂಡ ಹಾಜರಿದ್ದರು. ಮತ ಎಣಿಕೆ ಸ್ಥಳದ ಮುಂದಿನ ಭಾಗದಲ್ಲಿ ಸಾಕಷ್ಟು ಅಂಗಡಿ ಮುಗ್ಗಟ್ಟುಗಳಿವೆ ಆದರೆ ಅವುಗಳನ್ನು ಮತಎಣಿಕೆ ಸಲುವಾಗಿ ಬಂದ್ ಮಾಡಿಸಿದ್ದೆವು. ಮತ ಎಣಿಕೆ ಸ್ಥಳ ಎರಡು ಮಹಡಿಯ ಕಟ್ಟಡವಿದೆ. ಕಟ್ಟಡದ ಮೇಲ್ಭಾಗದಲ್ಲಿ ಧ್ವನಿವರ್ದಕ ಅಳವಡಿಸಿದರೆ ಸುತ್ತಮುತ್ತಲೂ ಸರಿಯಾಗಿ ಕೇಳುತ್ತದೆ. ಮತ ಎಣಿಕೆ ಸ್ಥಳದಿಂದ 200 ಮೀಟರ್ ಅಂತರ ಕಾಯ್ದುಕೊಳ್ಳಲು ಸಾರ್ವಜನಿಕರಿಗೆ ಸೂಚನೆಯಿತ್ತು. ಮತ ಎಣಿಕೆ ಸಮಯದಲ್ಲಿ ಎಜೆಂಟ್ ಹಾಗೂ ಅಭ್ಯರ್ಥಿಗಳನ್ನು ಹೊರತುಪಡಿಸಿ ಬೇರೆ ವ್ಯಕ್ತಿಗಳಿಗೆ ಅನುಮತಿಸಲಾಗುವುದಿಲ್ಲ.

200 ಮೀಟರ್ ಅಂತರ ಕಾಯ್ದುಕೊಳ್ಳುವ ಸ್ಥಳದಲ್ಲಿ ಕೂಡ ಪೋಲಿಸ್ ಸಿಬ್ಬಂದಿ ನೇಮಕವಾಗಿರುತ್ತಾರೆ. ಗೇಟಿನ ಮುಂಭಾಗದಲ್ಲಿ ಸದರಿ 200 ಮೀಟರ್ ಗಡಿಯನ್ನು ದಾಟಿಯೇ ಬರಬೇಕಾಗುತ್ತದೆ ಎಂದರೆ ಸಾಕ್ಷಿ ರಸ್ತೆಯಿದೆ ಕಾರಣ ಜನರು ಓಡಾಡುತ್ತಾರೆ ಎಂದು ಹೇಳುತ್ತಾನೆ. ಘಟನೆ ದಿವಸ ಯಾರು ಗೇಟಿನ ಬಳಿ ಬಂದಿರುತ್ತಾರೆಂದು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿ ಬಾತ್ಮಿ ಮೇರೆಗೆ ತಿಳಿದುಕೊಂಡಿರುತ್ತೇವೆ ಎಂದು ಹೇಳುತ್ತಾರೆ. ಘಟನೆ ದಿವಸ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-1, 4, 5 ರವರಿಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಚಾಸಾ-1 ನಮ್ಮ ಮೇಲಾಧಿಕಾರಿ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ